ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

## 1. ಶ್ರೀ ರಾಘವೇಂದ್ರ ಸ್ಮರಣಂ

ಶ್ರೀಪತಿ ದಯದಿಂ ರಾಘವೇಂದ್ರ । ಗೋಪಮ್ಮ ತನಯ ರಾಘವೇಂದ್ರ ।
ಪ್ರಹ್ಲಾದ ರಾಜಾ ರಾಘವೇಂದ್ರ । ಬಾಹ್ಲೀಕ ರಾಜಾ ರಾಘವೇಂದ್ರ ।
ಚಂದ್ರಿಕೆ ರಚಿಸಿದ ರಾಘವೇಂದ್ರ । ಚಂದ್ರಿಕಾರ್ಯನೇ ರಾಘವೇಂದ್ರ ।
ಸತ್ಯ ಲೋಕೇಶನ ರಾಘವೇಂದ್ರ । ಭೃತ್ಯನು ನೀನ್ಯೆ ರಾಘವೇಂದ್ರ ।
ಶಂಕು ಕರ್ಣನೇ ರಾಘವೇಂದ್ರ । ವೆಂಕಟ ಭಟ್ಟಾ ರಾಘವೇಂದ್ರ ।
ವೀಣಾ ವಂಶಜ ರಾಘವೇಂದ್ರ । ವೀಣಾ ಪಂಡಿತ ರಾಘವೇಂದ್ರ ।
ಪರಿಮಳ ಪಂಡಿತ ರಾಘವೇಂದ್ರ । ಸುರತರು ನೀನ್ಯೆ ರಾಘವೇಂದ್ರ ।
ಗೌತಮ ಗೋತ್ರಜ ರಾಘವೇಂದ್ರ । ಪೂತ ಚರಿತ್ರ ರಾಘವೇಂದ್ರ ।
ಸರಸ್ವತೀ ಪತಿ ರಾಘವೇಂದ್ರ । ಸರಸ ಕವೀಂದ್ರಾ ರಾಘವೇಂದ್ರ ।
ಚಂದನದಿಂದಲೆ ರಾಘವೇಂದ್ರ । ವಂದಿತನಾದ್ಯೆ ರಾಘವೇಂದ್ರ ।
ಭಾಟ್ಟ ಸಂಗ್ರಹ ರಾಘವೇಂದ್ರ । ಭಟ್ಟಾಚಾರ್ಯ ರಾಘವೇಂದ್ರ ।
ಗೀತಾ ವಿವೃತಿ ರಾಘವೇಂದ್ರ । ಪ್ರೀತಿಯ ಕೃತಿಯಿದು ರಾಘವೇಂದ್ರ ।
ಗದ್ಯವ ರಚಿಸಿದ ರಾಘವೇಂದ್ರ । ಪದ್ಯದಿ ಕರೆಯುವೆ ರಾಘವೇಂದ್ರ ।
ಶಾರದಾಜ್ಞೆಯಾ ರಾಘವೇಂದ್ರ । ಮೀರದೆ ನಡೆದ್ಯೆ ರಾಘವೇಂದ್ರ ।
ಮಡದಿಯ ಪ್ರೇತತ್ವ ರಾಘವೇಂದ್ರ । ಬಿಡಿಸಿ ಪೊರೆದೆಯೋ ರಾಘವೇಂದ್ರ ।
ಪ್ರೇತ ಪಿಶಾಚಿಯ ರಾಘವೇಂದ್ರ । ಯಾತನೆ ಕಳೆಯುವ ರಾಘವೇಂದ್ರ ।
ಕಾಡಿನ ವೆಂಕನ ರಾಘವೇಂದ್ರ । ಮಾಡಿದೆ ಮಂತ್ರಿಯ ರಾಘವೇಂದ್ರ ।
ನಿನಕ್ಕೆ ಮಣ್ಣದು ರಾಘವೇಂದ್ರ । ಕನಕವಾಯಿತೋ ರಾಘವೇಂದ್ರ ।
ಶಿಶುವು ಗತಿಸಲು ರಾಘವೇಂದ್ರ । ಅಸುಗಳನಿತ್ತೆ ರಾಘವೇಂದ್ರ ।
ನುಡಿದ ಭವಿಷ್ಯವು ರಾಘವೇಂದ್ರ । ನೆಡೆಸಿ ತೋರಿದಾ ರಾಘವೇಂದ್ರ ।
ವರಕನಕನು ತಂದ ರಾಘವೇಂದ್ರ । ಸರಷಪ ಬಳಸಿದೆ ರಾಘವೇಂದ್ರ ।
ಬುಧಜನ ಸನ್ನುತ ರಾಘವೇಂದ್ರ । ಬುದನಲಿ ಮುನಿದ್ಯೆ ರಾಘವೇಂದ್ರ ।
ಮರಳಿ ಬಂದೊಡೆ ರಾಘವೇಂದ್ರ । ಕರುಣಿಸಿ ಪೊರೆದ್ಯೆ ರಾಘವೇಂದ್ರ ।

ಸೃಷ್ಟೀಶ ದಾಸಾ ರಾಘವೇಂದ್ರ । ಮೃಷ್ಟಾನ್ನವಿತ್ತೆ ರಾಘವೇಂದ್ರ ।
ಕೇಳಿದ ಜನಪಗೆ ರಾಘವೇಂದ್ರ । ಮಾಲಿಕೆ ಇತ್ತೆ ರಾಘವೇಂದ್ರ ।
ವಿಪ್ರನ ಬವಣೆಯು ರಾಘವೇಂದ್ರ । ಕ್ಷಿಪ್ರದಿ ಕಳೆದೈ ರಾಘವೇಂದ್ರ ।
ವಿಪ್ರವರೇಣ್ಯಾ ರಾಘವೇಂದ್ರ । ಅಪ್ರತಿಮಹಿಮಾ ರಾಘವೇಂದ್ರ ।
ಭಕ್ತ ವೆಂಕಣ್ಣಗೆ ರಾಘವೇಂದ್ರ । ಮುಕ್ತಿಯನಿತ್ತೆ ರಾಘವೇಂದ್ರ ।
ಫಲಲವು ತಂದಿಡೆ ರಾಘವೇಂದ್ರ । ಫಲಮಂ ಮಾಡಿದೆ ರಾಘವೇಂದ್ರ ।
ಕ್ಷಮಾ ಸಮುದ್ರಾ ರಾಘವೇಂದ್ರ । ಕ್ಷಮಾ ಸುರೇಂದ್ರಾ ರಾಘವೇಂದ್ರ ।
ತಿಮ್ಮಣ್ಣ ಪುತ್ರಾ ರಾಘವೇಂದ್ರ । ಎಮ್ಮನು ಕಾಯ್ಯೆ ರಾಘವೇಂದ್ರ ।
ವಿರೋಧಿಕೃತ್ತಲಿ ರಾಘವೇಂದ್ರ । ಪರೋಕ್ಷದಾದಿನ ರಾಘವೇಂದ್ರ ।
ಶ್ರಾವಣ ಮಾಸವು ರಾಘವೇಂದ್ರ । ಪಾವನವಾಯಿತು ರಾಘವೇಂದ್ರ ।
ಕೃಷ್ಣ ಬಿದಿಗೆಯು ರಾಘವೇಂದ್ರ । ವಿಷ್ಣು ಸನ್ನಿಧಿಗೆ ರಾಘವೇಂದ್ರ ।
ಭಾಗವತೋತ್ತಮ ರಾಘವೇಂದ್ರ । ಯೋಗೀಂದ್ರ ವಂದ್ಯಾ ರಾಘವೇಂದ್ರ ।
ಅಪ್ಪಣ್ಣನಾ ತುತಿ ರಾಘವೇಂದ್ರ । ಒಪ್ಪಿಗೆ ಆಯ್ತೆ ರಾಘವೇಂದ್ರ ।
ವಾದೀಂದ್ರ ಸನ್ನುತ ರಾಘವೇಂದ್ರ । ಶ್ರೀಗುರುರಾಜಾ ರಾಘವೇಂದ್ರ ।
ಯೋಗೀಂದ್ರ ಕುಲಮಣಿ ರಾಘವೇಂದ್ರ । ಜ್ಞಾನಿ ಶಿರೋಮಣಿ ರಾಘವೇಂದ್ರ ।
ತುಂಗಾತೀರದ ರಾಘವೇಂದ್ರ । ಮಂಗಳ ಮಹಿಮಾ ರಾಘವೇಂದ್ರ ।
ಮಂಚಾಲೆ ಗುರುವೇ ರಾಘವೇಂದ್ರ । ಮಿಂಚಂತೆ ಹೊಳೆಯುವೆ ರಾಘವೇಂದ್ರ ।
ಕರ್ಮಜ ದೇವತೆ ರಾಘವೇಂದ್ರ । ಧರ್ಮನಿರತನೀ ರಾಘವೇಂದ್ರ ।
ಬೃಹ್ಮದಿದ್ವರಾ ರಾಘವೇಂದ್ರ । ಬ್ರಾಹ್ಮಣ ಬಂಧೋ ರಾಘವೇಂದ್ರ ।
ಪುತ್ರರ ಕರುಣಿಪೆ ರಾಘವೇಂದ್ರ । ನೇತ್ರಗಳೀಯುವೆ ರಾಘವೇಂದ್ರ ।
ಸಂಗೀತಪ್ರಿಯ ರಾಘವೇಂದ್ರ । ಮಂಗಳ ಚರಿತಾ ರಾಘವೇಂದ್ರ ।
ಕನಕ ಕವಚದಾ ರಾಘವೇಂದ್ರ । ಮುನಿವರ ನೀನ್ಯೆ ರಾಘವೇಂದ್ರ ।
ಬೆಳ್ಳಿಯ ರಥದಲಿ ರಾಘವೇಂದ್ರ । ಮೆಲ್ಲನೆ ಬರುವಾ ರಾಘವೇಂದ್ರ ।
ವಿಜಯ ದಾಸರೂ ರಾಘವೇಂದ್ರ । ನಿಜತುತಿಗೈದರು ರಾಘವೇಂದ್ರ ।
ಗೋಪಾಲದಾಸರು ರಾಘವೇಂದ್ರ । ಕಾಪಾಡು ಎಂದರು ರಾಘವೇಂದ್ರ ।
ತಮ್ಮನು ಕರೆಯಲು ರಾಘವೇಂದ್ರ । ಸುಮ್ಮನಾದೆಯೋ ರಾಘವೇಂದ್ರ ।

ಬರುತಿರೆ ಮನುಜರು ರಾಘವೇಂದ್ರ । ದರುಶನವಿತ್ತೈ ರಾಘವೇಂದ್ರ । 100

ರಾಮರ ಪೂಜಿಪೆ ರಾಘವೇಂದ್ರ । ಚಾಮರ ಬೀಸುವೆ ರಾಘವೇಂದ್ರ ।

ಪಾಮರನಂ ನೋಡು ರಾಘವೇಂದ್ರ । ಕಾಮಿತವಂ ಕೊಡು ರಾಘವೇಂದ್ರ ।

ಜಾತಿಯ ಮಾತೇಕೆ ರಾಘವೇಂದ್ರ । ಚೇತನ ನೋಡೈ ರಾಘವೇಂದ್ರ ।

ಭಕ್ತಿಯೇ ಸಾಕ್ಯೈ ರಾಘವೇಂದ್ರ । ಭಕ್ತವತ್ಸಲಾ ರಾಘವೇಂದ್ರ ।

ನಿತ್ಯ ವೈಭವ ರಾಘವೇಂದ್ರ । ನಿತ್ಯ ಮಂಗಳಾ ರಾಘವೇಂದ್ರ । 110

ಭೀಮವಾಣಿಯಿದು ರಾಘವೇಂದ್ರ । ಕಾಮಿತ ಕೊಡುವುದು ರಾಘವೇಂದ್ರ ।

ಜಯ ಜಯ ಮಂಗಳ ರಾಘವೇಂದ್ರ । ಜಯ ಶುಭ ಮಂಗಳ ರಾಘವೇಂದ್ರ । 114

॥ ಶ್ರೀ ಕೃಷ್ಣಾರ್ಪಣಮಸ್ತು ॥

## 2 . ಶ್ರೀ ರಾಘವೇಂದ್ರ ಸದ್ಗುರು ಕಥಾನುವಾದ

ಶ್ರೀ ಗುರುರಾಯರ ಪೂರ್ವ ಕಥಾಂಮೃತ ಸಾರವ ಸೇವಿಸಿ ಸಜ್ಜನರೇ ।

ಬೇಗದಿ ಪಾಪವ ಹೋಗಲಾಡಿಸುತ ಸುಕೃತಿಗಳೆನಿಸಿರಿ ಸಹೃದಯರೇ ॥ 1 ॥

ವೀಣಾವಾದನ ನಿಪುಣ ವೈಷ್ಣವನು ಗೌತಮ ಗೋತ್ರಜ ಭೂಸುರನು ।

ಜಾಣನು ವೈಧಿಕ ವಿದ್ಯಾವೇತ್ತನು ಕೃಷ್ಣಭಟ್ಟನಿಗೆ ಮೊಮ್ಮಗನೆನೆಸಿದ ॥ 2 ॥

ತಂದೆ ತಾಯಿ ತಿಮ್ಮಣ್ಣಭಟ್ಟ ಗೋಪಮ್ಮ ರೆಂಬುವರ ಕಿರಿಮಗನು ।

ಇಂದಿರೇಶ ಶ್ರೀ ಶ್ರೀನಿವಾಸ ಪೂರ್ಣಾನುಗ್ರಹ ಬಲದಿಂದುದ್ಭವಿಸಿದ ॥ 3 ॥

ಪಿತನೆಡೆ ಕೆಲದಿನ ಭಾವನ ಬಳಿಯಲಿ ವಿದ್ಯಾಭ್ಯಾಸವ ಮಾಡಿದನು ।

ಹಿತದಿಂದಣ್ಣನ ಮುಖದಲಿ ವೀಣಾ ಗಾಯನ ಕಲೆಯನು ಕಲಿಯುತ ಮೆರೆದ ॥ 4 ॥

ಶ್ರೀ ಸುಧೀಂದ್ರರಲಿ ಮಧ್ವ ಭಾಷ್ಯವನು ತಿಳಿಯುತ ವಿರಚಿಸಿ ಪರಿಮಳವ ।

ಭೂಸುರವರ ವೇಂಕಟಭಟ್ಟನು ಬಿರುದಾಂತು "ಪರಿಮಳಾಚಾರ್ಯ" ನೆನಿಸಿದ ॥ 5 ॥

ಮನ್ನರ ಗುಡಿಯಲಿ ದ್ರಾವಿಡ ಯತಿಯನು ವ್ಯಾಕರಣ ಮಹಾಭಾಷ್ಯದಲಿ ।

ಘನ್ನ ವಾದದಲಿ ಸೋಲಿಸುತ "ಮಹಾಭಾಷ್ಯಾಚಾರ್ಯ" ಪ್ರಶಸ್ತಿಯ ಪಡೆದ ॥ 6 ॥

ರಾಜಾಶ್ರಯದಲಿ ತಂಜಾವೂರಲಿ ವಾದದಿ ಗೆಲ್ಲುತ ಸಭೆಯೊಳಗೆ ।

ಸೋಜಿಗ ತೋರುತ ಶ್ರೀಸುಧೀಂದ್ರರಿಗೆ ಭಟ್ಟಾಚಾರ್ಯನೆಂದು ಹೊಗಳಿಸಿಕೊಂಡ ॥ 7 ॥

ಭುವನಗಿರಿಯಲಂದು ಕನ್ಯಾಮಣಿಯ ಸರಸ್ವತಿಯೆಂಬಳ ಕೈಪಿಡಿದು ।

ಸುವಿವೇಕದಿ ಗ್ರಾಹಸ್ತ್ಯವ ಸೌಖ್ಯದಿ ಕೆಲವು ವರ್ಷಗಳು ನಡೆಸುತಲಿದ್ದ ॥ 8 ॥
ಪುತ್ರೋತ್ಸವದಲಿ ಹರ್ಷಿಸಿ ಸೂಕ್ತ ಸುಕರ್ಮವ ಸಾಂಗದಿ ನೆಡೆಸುತಲಿ ।
ಮತ್ತೆ ಬಡತನದ ಭಂಗಕೆ ಸಿಲುಕಿರೆ ದೇಶ ದೇಶಗಳ ತಾ ಸಂಚರಿಸಿದ ॥ 9 ॥
ಓದುವ ಶಿಷ್ಯರ ನಂಬಿದ ಸತಿಸುತರಾದಿಯಾದವರ ರಕ್ಷಿಸಲು ।
ಖೇದ ಪಡದೆ ಸಮ್ಮೋದದಿ ಸಜ್ಜನ ಪ್ರೋತ್ಸಾಹದಿ ಸಲಹಿದ ಗುಣಶಾಲಿಯ ॥ 10 ॥
ಭೂಸುರ ಸಂತರ್ಪಣೆಗೆ ಪುರೋಹಿತ ನೇಮಿಸೆ ಗಂಧವ ತೇಯ್ದಿಡಲು ।
ಪೂಸಲು ಮೈಯ್ಯಲಿ ಬೊಬ್ಬೆಗಳೇಳಲು ವರುಣ ಸೂಕ್ತದಿಂ ತಾಪವ ಹರಿಸಿದ ॥ 11 ॥
ಪಶ್ಚಾತ್ತಾಪಿಸಿ ತಪಶ್ಶಕ್ತಿಯ ದುರ್ವ್ಯಯಗೊಳಿಸದಿರಲು ಪಯಣವನು ।
ನಿಶ್ಚಲ ಚಿತ್ತನು ನಿಲಿಸಿ ಪರಾನ್ನದ ನೇಮಗೈದು ನಿಜಪುರಿಗೈ ತಂದ ॥ 12 ॥
ಒಂದು ರಾತ್ರಿಯಲಿ ದೈವವಿಲಾಸದಿ ಚೋರರಿಂದ ಮನೆ ಬರಿದಾಗೆ ।
ಮುಂದಿನ ಪಥ ನೆಡೆಯದಿರೆ ಸುಧೀಂದ್ರರ ಬಳಿಗೆ ಸತಿಸುತರ ಸಹಿತೈತಂದ ॥ 13 ॥
ಮಗನುಪನಯನವನಾಗಿಸಿ ಗುರುಗಳು ಮಮತೆಯೊಳಿವರನು ಕಾಣುತಿರೆ ।
ಒಗುಮಿಗೆ ಹರುಷದಿ ಮನದಿ ಕೃತಜ್ಞತೆ ಭಾವವ ಗುರುವಿನೊಳರ್ಪಿಸುತಿದ್ದ ॥ 14 ॥
ಯಾದವೇಂದ್ರರಿಗೆ ಆಶ್ರಯ ದೊರಕಿರೆ ಮತ್ತೆ ಸ್ವಪ್ನ ವೃತ್ತಾಂತವನು ।
ಮೋದದಿ ಗುರುಗಳು ಪೇಳಲು ಯೋಚಿಸಿ ವಾಣಿಯ ಭಯವೀಯಲು ನಿರ್ಧರಿಸಿದ ॥ 15 ॥
ಸತಿಯನು ಮತಿಯಲಿ ಸಮ್ಮತಿ ಗೊಳುತಲಿ ಸತಿಸುತರೆಲ್ಲರ ಕಳುಹುತಲಿ ।
ಅತಿ ಹಿತದಲಿ ವಿಧಿವಿಹಿತ ಮಾರ್ಗದಲಿ ಕ್ರಮ ಸನ್ಯಾಸವ ಸ್ವೀಕರಿಸಿ ಮೆರೆದ ॥ 16 ॥
"ಶ್ರೀರಾಘವೇಂದ್ರ ತೀರ್ಥಾಭಿದ" ತಾನೆನಿಸುತಲಿ ಸುಧೀಂದ್ರರ ದಯದಿ ।
ರಾರಾಜಿಸೆ ರಘುನಾಥ ಭೂಪ ಮೊದಲಾಗಿ ಸಕಲರಿಂ ವಂದನೆಗೊಂಡ ॥ 17 ॥
ಸರ್ಪಕಚ್ಚಿ ಮೃತನಾದ ನವಾಬನ ಮಗನ ಬದುಕಿಸುತ ಮಾರ್ಗದಲಿ ।
ಅಪ್ಪುನೆಳಲ ಕಲ್ಪಿಸುತ ಸೇವಕನ ಸತಿಯ ಪ್ರಸವಕೆ ದಯೆಬೀರಿದ ॥ 18 ॥
ಶ್ರೀನಿವಾಸರಪರಾಧವ ಕ್ಷಮಿಸುತ ಪಾಂಡಿತ್ಯಕೆ ಮನ ಮೆಚ್ಚುತಲಿ ।
ಮೌನಿಗೆ ಸಲ್ಲುವ ತೀರ್ಥ ಪ್ರಶಸ್ತಿಯ ಕರುಣಿಸಿ ಹೃದಯದ ಸರಳತೆ ತೋರಿದ ॥ 19 ॥
ದೈವಜ್ಞರ ಮೂವರ ಹೇಳಿಕೆಗಳ ಭಾವಿಸಿ ಸತ್ಕರಿಸುತಲವರ ।
ಸೇವೆಗೈದು ಶ್ರೀ ಶ್ರೀನಿವಾಸನನು ತನ್ನಯ ತೂಕದ ಚಿನ್ನವರ್ಪಿಸಿದ ॥ 20 ॥
ಅಗ್ನಿಮುಖದ ನವರತ್ನಮಾಲೆಯ ಸಮರ್ಪಿಸಿ ಪುನರಪಿ ಪಡೆದದನು ।

ಯಜ್ಞನಾಮಕಗೆ ಶ್ರೀರಾಮಗೆ ಸಮಗ್ರ ಭಕುತಿಯಲಿ ಕಾಣಿಕೆಯಿತ್ತ ॥ 21 ॥

ಕೃಷ್ಣದ್ವೈಪಾಯನ ಯತಿಗಳ ವೈಕುಂಠ ಗಮನವರಿದವರೊಡನೆ ।

ಇಷ್ಟ ವಾಕ್ಯಗಳ ನುಡಿದು ವಂದಿಸಿದ ಇಷ್ಟ ದೈವ ಶ್ರೀರಾಮಾರಾಧಕ ॥ 22 ॥

ಆದವಾನಿ ವೆಂಕಣ್ಣನ ಸೇವೆಯನಾದರದಲಿ ಸ್ವೀಕರಿಸುತಲಿ ।

ಬೇಧಬುದ್ಧಿಯಲಿ ಪರಿಕಿಸಿ ಬಂದಾ ಮ್ಲೇಚ್ಛದೊರೆಯ ಮನ ಮಲಿನವ ತೊಳೆದ ॥ 23 ॥

ಪರಮಗುರು ದ್ರೋಹದ ಪಾಪದ ಪರಿಹಾರಕೆ ನವಾಬನು ಮೊರೆಯಾಗಲು ।

ಕರುಣಿಸುತಭಯವ "ಮಂಚಾಲೆಯ" ಭೂಭಾಗವನವನಿಂ ಪಡೆದು ಹರಸಿದ ॥ 24 ॥

ಹಿಂದೆ ಭಕುತ ಪ್ರಹ್ಲಾದ ಯಜ್ಞಗಳನಲ್ಲಿಗೈದ ಸುಸ್ಥಳವೆನುತ ।

ಮುಂದಾಲೋಚಿಸಿ ಯಜ್ಞಕುಂಡದಲಿ ಬೃಂದಾವನ ರಚನೆಗೆ ನೇಮಿಸಿದ ॥ 25 ॥

ಶ್ರೋತ್ರಿಯರಿಗೆ ಅರವತ್ತು ಕುಟುಂಬಕೆ ನೆಲಮನೆ ಹಣವಸ್ತ್ರಾದಿಗಳ ।

ಅರ್ತಿಯಿಂದ ದಾನವ ಕೊಡಿಸುತ ಕುಲದೇವಿ ಮಂಚಾಲಮ್ಮನ ಸ್ತುತಿಸಿದ ॥ 26 ॥

ಮೇಷ ಮಸ್ತಕದ ಲಾಂಛನವಿಡಿಸಿ ಮಹಾದ್ವಾರದಿ ತದನಂತರದಿ ।

ಸಂತೋಷದಿ ಯೋಗೀಂದ್ರರಿಗೆ ಪಟ್ಟವನು ರಚಿಸಿ ಕ್ಷೇತ್ರ ದಿಗ್ಬಂಧನೆಗೈಸಿದ ॥ 27 ॥

ಎಸೆಯುವ ಶ್ರಾವಣ ಬಹುಳ ಬಿದಿಗೆಯಲಿ ಮೂರ್ತಿಚತುಷ್ಟಯ ಸಹಿತದಲಿ ।

ಸಶರೀರದಿ ಬೃಂದಾವನ ಮಂದಿರವನು ಸಂತೋಷದಿ ಸೇರಿದ ಯತಿವರ ॥ 28 ॥

ಲೋಕದ ಜನರಿಗೆ ನೋಡುವ ಕಣ್ಣಿಗೆ ದೇಹಮಾನ ನೂರೇವರುಷ ।

ಸಾಕೆನಿಸಿತು ಮುನ್ನೂರು ವರ್ಷವದು ಗ್ರಂಥ ಪ್ರಚಾರದ ದೃಷ್ಟಿಗೆಂದರಿತು ॥ 29 ॥

ಹಾನಿ ಇಲ್ಲ ಗುರುದೇವನ ದೇಹಕೆ ಬೃಂದಾವನದಿ ಸಪ್ತಶತ ವತ್ಸರವು ।

ಮೌನಿವರೇಣ್ಯನು ಮರೆಯೊಳಿರುತ ಬೃಂದಾವನ ಮಹಿಮೆಗೆ ಬೆಂಬಲನಾಗಿಹ ॥ 30 ॥

ಮೇಲುಭಾಗದೊಳಗೇಳುನೂರು ಸಾಲಿಗ್ರಾಮಗಳವು ಸ್ಥಾಪಿತವು ।

ಏಳುನೂರಂಬುದು ಮಹಿಮೆಯ ಗೋಚರವೆನುವ ಭಾವನೆಯ ಜನರಿಗೆ ತೋರಿಹ ॥ 31 ॥

ಕಾಮರೂಪಿಗಳು ಸಾಂಶರಿವರು ಸಶರೀರದಿ ಬೃಂದಾವನ ಸೇರಿ ।

ಪ್ರೇಮದಿ ಜಪಸರ ಪಿಡಿದು ಪೂರ್ವಕಭಿಮುಖರಾಗುತ ಪದ್ಮಾಸನದಿ ಕುಳಿತ ॥ 32 ॥

ಮಾರುತಿಯನು ಕಣ್ಣಾರೆ ನೋಡುತಲಿ ಧ್ಯಾನಸಮಾಧಿಯೊಳಗೆ ನಿಂದು ।

ಶ್ರೀರಘುವರನನು ಹೃತ್ ಸರಸಿಜದಲಿ ಕಾಮಿಸಿ ನೆನೆಯುತಲಿಂದಿಗು ಮೆರೆಯುವ ॥ 33 ॥

ಮುಕುತಿ ಸಾಧನೆಗೆ ಇಷ್ಟು ಪುಣ್ಯವನು ಮೊದಲೇ ಸಾಧಿಸಿದವರಿವರು ।

ಯುಕುತಿಯಚ್ಚರಿಯು ಇವರಾರ್ಜಿಸಿದ ಸುಕೃತದ ರಾಶಿಯ ಭಜಕರಿಗೀಯುವ ॥ 34 ॥
ಅಪ್ಪಣ್ಣನ ಭಯಭಕ್ತಿ ರಚಿತನುತಿಗೊಪ್ಪಿಗೆ ಮುದ್ರೆಯ ಕರುಣಿಸಿದ ।
ಕಪ್ಪುಶರೀರದ ಹಣೆಗಂಟಿನ ಯತಿ ತಪ್ಪು ತಿಳಿದವರ ತಿದ್ದುತಲಿ ಪೊರೆವ ॥ 35 ॥
"ಪರಮ ಪವಿತ್ರ ಚರಿತ್ರೆ" ಯಿದನು ಹೇಳುವ ಕೇಳುವ ಸಜ್ಜನತತಿಯ ।
ಪರಮ ಸತ್ಯಧರ್ಮವ್ರತ **ಶ್ರೀ ಗುರುರಾಘವೇಂದ್ರ** ಸಲಹುವ ಸತತ ॥ 36 ॥
ಶ್ರೀರಘುವರನ ಪದಾಂಬುಜ ಬೃಂಗನು ಶ್ರೀರಾಘವೇಂದ್ರ ಯತಿರಾಜ ।
ಸಾರಿನುತಿಪ ಸಜ್ಜನರಿಗನವರತ ವರಕಾಮಧೇನು ಸುರಭೋಜ ॥ 37 ॥
**"ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮರತಾಯಚ ।**
**ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ ॥"**

## 3 . ಶ್ರೀ ರಾಘವೇಂದ್ರ ಸ್ತವನ

ಗುರುರಾಘವೇಂದ್ರ ತವ ಚರಣಾರವಿಂದದ ಭ್ರಮರನೆನೆಸುವ ಮನುಜಗೆ
ಪರಿಮಳವು ಷಟ್ಪದಕೆ ವರಕಮಲ ಪ್ರಪತಿಯಿಂ ಭರದಿಂದ ದೊರೆವಂದದೀ
ಸ್ಥಿರಭಕ್ತಿ ಜ್ಞಾನ ವಿಸ್ಫುರಿಸುವುದು ನಿತ್ಯ ಸುಖ ಖರೆಯಿದೂ ಸಟೆಯಲ್ಲವೋ
ಕರೆದು ಕಾಮಿತವೀವ ಸುರಧೇನು ವಿರಲನ್ಯ ನರರ ಸ್ತುತಿಸುವುದ್ಯಾತಕೇ ॥
ಪ್ರಹ್ಲಾದನಾಗಿ ಶ್ರೀ ನಲ್ಲನ್ನ ಭಕ್ತಜನರೆಲ್ಲಾರಿಗಿವತೋರಿದಾ
ಉಲ್ಲಾಸದಲಿ ಮುನಿಗಳಲ್ಲುತ್ತಮನು ಹರಿಯು ಎಲ್ಲರೊಳಗಧಿಕನೆಂದಾ
ಸಲ್ಲಾದ ಸಣ್ಣಯತಿ ಮಲ್ಲನಿವನೀ ಜಗದೊಳೆಲ್ಲಾ ದ್ವಿಜರ ಸಲಹಿದಾ
ಒಳ್ಳೇ ಮನದಿ ಭಕ್ತರೆಲ್ಲಾರು ಇವರ ಸ್ತುತಿ ಉಲ್ಲಾಸದಿಂ ಕೇಳ್ವುದೂ ॥
ಇಂದ್ರಾದ್ಯಮರು ಈ ಬೃಂದಾವನದಲಿ ಗೋವಿಂದನ್ನ ಕೂಡಿರುವರೂ
ಪೊಂದಿರ್ಪುವಿಲ್ಲಿ ಮುನಿ ವೃಂದಾದಿ ದಾಸಕುಲ ವೀಂದ್ರ ಧ್ವಜನ ದೂತನ
ಸುಂದರನು ಇಲ್ಲಿರಲು ಚಂದವಿರವೀಸ್ಥಾನ ಕೇಂದ್ರವೆನಿಪುದು ಬುಧರಿಗೆ
ಸಂದೇಹವಿಲ್ಲವೊ ಯತೀಂದ್ರನ್ನ ರೂಪದಿಂ ದಿಂದ್ರಾವರಜ ನಿಂತಿಹ ॥
ಶ್ರೇಷ್ಠಾದ ಭಕ್ತಿ ಉಚ್ಛೇಷ್ಟದಲಿ ಬರಲು ಸಕಲೇಷ್ಟ ಪ್ರದಾತನಡಿಗೆ
ಕಷ್ಟಾಲಯದಲಿ ಕಡು ಶ್ರೇಷ್ಟಾನಲಿಟ್ಟಂತೆ ಕುಷ್ಟಾದಿಗಳ ಸುಡುವನು
ಎಷ್ಟೇಳಲಿವನ ಬಲು ಸಾಷ್ಟಾಂಗವೆರೆಗೆ ಸಂತುಷ್ಟಾಗಿ ತಾನೊಲಿವನೂ

ಕಷ್ಟಂಗಳಂ ಬಿಡಿಸಿ ಇಷ್ಟಾರ್ಥವಂ ಕೊಟ್ಟು ಯತಿ ಶ್ರೇಷ್ಟ ಪ್ರಭು ಪೊರೆವನು ॥
ಬಿನ್ನೈಪನೋ ಯತಿವರೇಣ್ಯ ಪ್ರಭೋ ಯೆನಲು ಚಿನ್ನಾ ನೀ ಬಾ ಎಂಬನೋ
ಕಣ್ಣೀಗೆ ಎವೆಯಂತೆ ಚೆನ್ನಾಗಿ ಪೋಷಿಸುವ ಯೆನ್ನಾಣೆ ಸುಳ್ಳಲ್ಲವೋ
ಇನ್ನೇನು ಈ ಶ್ರೇಷ್ಟ ಸನ್ಯಾಸಿ ಭಕ್ತರನು ಸನ್ಮಾನದಿಂ ಪೋಷಿಪಾ
ಪುಣ್ಯಾಸೆ ಜನಕೆ ಸ್ವಪುಣ್ಯ ಪ್ರದಾನದಿಂ ಚಿನ್ನಾಂಗನಿವ ತೋರುವ ॥
ರೋಗಾದ್ಯನೇಕ ವಿಧ ಭೋಗೋಪ ಭೋಗದಲಿ ಸಾಗಿರ್ದು ಕಂಗೆಡದಲೀ
ಯೋಗೇಶನಡಿಗಳನು ರಾಗಾದಿ ಭಜಿಸೆ ಬಲು ಬೇಗಾದಿ ಬಂದು ಪೊರೆವ
ಭಾಗೀದೊಡವೆಗೆ ಶಿರವಾಗಾಗ್ಗೆ ಫಲಬಹುದು ಭಾಗೀರಥೀ ಸ್ನಾನದಾ
ಯಾಗಾದಿಗಳ ಪುಣ್ಯ ಭೋಗಂಗಳಂಬುವರು ನಾಗಾಧಿಜನ ಪುರದೀ ॥
ಮದ್ವಾದರಾಯ ಪ್ರಸಿದ್ಧಾದ ವಾರಾಹಿ ಶುದ್ಧವಿಹ ದಂಡೆಮೇಲೇ
ಸಿದ್ಧಸ್ತದಿಂದ ಪರಿಶುದ್ಧಾತ್ಮ ಕುಳಿತಿಹನು ಸದ್ ವೈಷ್ಣವಾಬ್ಧಿ ಚಂದ್ರ
ಉದ್ಧಾರಗೈವ ಭವಬದ್ಧರನು ಪೊರೆವ ಬಲು ಶ್ರದ್ಧೆಯಿಂ ಭಜಿಸಿದೊಡನೆ
ಮಧ್ವಾರ್ಯ ಮತದೀಕ್ಷೆ ಯದೃಟ್ಟ ಲಾಭವಿತ್ತುದ್ದೇಶ ಪೂರೈಪನೋ ॥
ತುಂಗಾನಿವಾಸ ದಿವ್ಯಾಂಗ ಪ್ರಭೋ ಜನರ ಭಂಗಕ್ಕೆ ಗುರಿ ಮಾಡನೋ
ಶೃಂಗಾರ ವದನ ನರ ಸಿಂಗಾಂಗ ಶರಧಿ ಶಶಿ ಯಂಗೇನು ಭಜಿಸದಿಹುದೂ
ಗಂಗಾದಿಗಳಲಿ ಮಲ ಹಿಂಗೂವುದೇ ಪಾಂಡುರಂಗನ್ನ ಪದಕಮಲಕೇ
ಭೃಂಗಾನೆನಿಪ ಬುಧೋ ತ್ತುಂಗನ್ನ ಭಾಗವತ ಜಂಗೂಳಿಯಾ ನಮಿಸದೇ ॥
ಉತ್ಕೃಷ್ಟ ರಥದಿ ಮುನಿ ಯೊತ್ತಾಯದಲಿ ಕುಳಿತು ರತ್ನಾದಿ ಮಾಲೆ ಧರಿಸಿ
ಕಸ್ತೂರಿ ತಿಲಕ ಮೇಣ್ ಕೆತ್ತಿರ್ದ ಪದಕ ಪೊಳೆಯುತ್ತಿರ್ಪುವೋ ಕಣ್ಣಿಗೆ
ನಿತ್ಯದಾ ಸುಖ ಬಯಿಪರೊತ್ತಾಯದಲಿ ಬನ್ನಿ ಮತ್ತೇನು ಬೇಕೆನುತಲೀ
ಭಕ್ತಿಗೊಲಿದರೆ ಜನರಿಗತ್ಯಾದರಿಸುವುದಕೆ ಚಿತ್ತಗುಹವಾಸ ಪೇಳ್ವ ॥
ಸಿಕ್ಕಲ್ಲಿ ಐಹಿಕ ಸುಖಕ್ಕಾಗಿ ಪೋಗಿ ತ್ವರ ಪೊಕ್ಕಾಲಯದಲಿ ನರರ
ರೊಕ್ಕಕ್ಕೆ ಸೇವಿಸುತ ದಿಕ್ಕಿಲ್ಲದವರಂತೆ ಧಿಕ್ಕಾರವೋ ಜನ್ಮಕೆ
ಪಕ್ಕಂಗಳಂ ಕಳೆದ ಪಕ್ಷಿ ಪ್ರತನೆಯಂತೆ ಈ ಕ್ಷೋಣಿಯಲಿ ಬಾಳದೇ
ತಕ್ಕದ್ದಪೇಕ್ಷಿಸುವುದಕ್ಕಾಗಿ ಇಲ್ಲಿಹನು ಆಕ್ಷೇಪಣವು ಇಲ್ಲವೋ ॥
ವಾರಾಹಿವಾಸ ಭೂಭಾರಾದಿ ದಿವ್ಯರಥವೇರುತ್ತಲಾ ಕ್ಷಣದಲೀ

ವಾರಾಂಗನೇರು ಬ್ರಹ್ಮ ಚರಾದ್ಯನೇಕ ಜನ ಸಾರಾದ ಸಂಗೀತದೀ
ಬಾರೋ ನೀ ಭವರೋಗ ದೂರಾ ಯತಿಯೆ ಎಂದು ಸಾರುತ್ತ ಡಂಗೂರಗಳ
ಕಾರುಣ್ಯನಿಧಿ ಯತಿಯು ನಾರಾಯಣನ ತೋರ್ಪ ನಾರಾಧಿಪರ್ಗೆ ಬಿಡದೆ ॥
ನಾ ನಾ ಬಗೆಯ ಈ ಕ್ಷೋಣೀಯ ಜೀವರಿಗೆ ನಾನಾ ವಿಧದಿ ಕಾಣುವಾ
ಆನೆಗೊಲಿದವ ಪ್ರಿಯನು ದಾನಗಳನಿತ್ತು ಸುಖ ಜ್ಞಾನಾದಿ ಭಕ್ತಿ ಈವ
ನಾನಾರ್ಥವೀವ ಯತಿ ಮಾನೋತ್ತಮರಿಗೆ ಈ ಕ್ಷೋಣೀಯೊಳಾರಿರುವರೋ
ಗಾನಾ ವಿಮೋಹಕನು ಮಾನಿಲ್ಲ ಪೊರೆವ ಪ್ರಮಾಣವೇ ಭೋಗವಿರಲು ॥
ಗುಂಪಾಗಿ ಭಾಗವತರಿಂಪಾದ ಗಾಯನದಿ ಮಾಂಪಾಹಿ ಗುರುವೆಂಬರೂ
ಕೆಂಪಾದ ಕಮಲಾಕ್ಷ ಕಂಪಿಸುವೆವೀ ಭವದಿ ನೀಂ ಪಾಲಿಸೆಂದೆನುತಲೀ
ನೀಂ ಪಾಲಿಸದಿರೆ ಈ ಗುಂಪುಗಳ ಗತಿಯೇನು ನಾಂ ಪೇಳಲಾರೆನುತಲೀ
ಚಂಪಕಾ ನಾಸಿಕನೆ ಪೆಂಪೊಡೆದ ಪದಜ್ಯೋತಿ ತಂಪಾಗಿ ಪಸರಿಸುವುದೂ ॥
ಶಾಂತತೆಯಲಿ ಚಂದ್ರ ಸಂತೋಷದಲಿ ಕಡಲ ಕಾಂತಿಯೊಳಗಿವ ಭಾಸ್ಕರ
ಅಂತೇನು ಇವನ ಕರುಣಿಂತಾದು ಬಲು ಜ್ಞಾನವಂತ ನೆನಿಪನೆ ಪೊಗಳನೂ
ಚಿಂತಿಸುವುದೇಕೆ ಜನ ಭ್ರಾಂತಿಯಲಿ ಬರಿದೆ ಶ್ರೀಮಂತಿಗೆಯಲಿ ದನುಜ ತನಯಾ
ಪಂಥದಲಿ ಬಲಿತಾತ ಸಂತೇನ ದಾನದಲಿ  ಮಂತ್ರಾಲಯಾನಿವಾಸ ॥
ನೀಲಾಂಗ ಭಕ್ತ ಭವ ಜಾಲಾ ವಿನಾಶ ಕುಲ ಕೋಲಾಹಲ ವಿದೂರನೂ
ಶೀಲೋತ್ತಮನು ತುಳಸಿಮಾಲಾ ವಿಭೂಷಿತನು ಶೀಲೇಂದ್ರ ವಂದ್ಯನಿವನು
ವ್ಯಾಲಾಲಯಿದ ಆಲಯ ಬಾಳಿರ್ಪ ತೆರ ಮೋಹಜಾಲ ವಾಗಿಹ ಭವದಲಿ
ಕಾಲೆಂತ ಕಳೆವುದೆನೆ ಬಾಲಾ ನೀ ಬಾ ಎಂಬ ಪಾಲಾಬ್ಧಿ ಶಯನ ದಾಸಾ ॥
ನಿಗಮದ ಧ್ವನಿಗಳೀ ಜಗದೇವತೆಗಳೆಲ್ಲ ಸ್ಥಗಿತ ಭಕ್ತಿಲಿ ಗೈಯುತಾ
ಮಿಗೆ ಧನ್ಯವಾದವೀ ಜಗದೊಳಗೆನುತ ಗುರುಗಳಘ ಕಳೆವ ಚರಣ ಕಂಡೂ
ಪೊಗಳಲಳವೇ ಜಗ ಗುರುವಿರಲು ದೈವ ಮಿಗಿಲಾದ ಕನ್ನಡಿಗರಾ
ಮಗುವೆಂದು ಪೊರೆದನುಜ ಮಗನೆಂದು ದಾಸಕುಲ ಕರಮುಗಿದು ಕನ್ನಡಿಗಗೇ ॥
ಶ್ರೀಶನಂಘ್ರಿಯ ದೂತ ಪೋಷಿಸಲು ಭಕ್ತರನು ಘಾಸಿಗೊಳಿಸದಲೆಂದಿಗೂ
ನೀ ಸಲಹದಿರಲು ಈ ಭೂಸುರೆನಿಪರು ನರರ ದಾಸರಾಗುವರು ಬಿಡದೇ
ಘಾಸಿಗೊಂಡರು ಬಲು ದುರಾಶೆ ಹೆಚ್ಚಿತು ದ್ವಿಜರು ಘಾಸಿಸಲ್ಪಡುವರಿಹದೀ

ಈಸೋ ಕಾಯಿಯಂತೆ ಭೂಸುರರ ಬಿಡದೆ ನೀ ಪೋಷಿಸೆನ್ನವರೆನುತಲಿ ॥
ವ್ಯಾಕರಣ ಗಣಯತಿಗಳಾ ಕಠಿಣ ಮಾತ್ರೆಗಳ ಸ್ವೀಕರಿಸಕೂಡದೆಂದೂ
ಲೇಖಕನು ಬಿನ್ನೈಪ ಪ್ರಾಕೃತವಿದೆಂದು ಜನ ಭೀಕರದ ಟೀಕೆ ಬಿಟ್ಟು
ವ್ಯಾಕುಲದ ಭವರೋಗ ಕೇಕ ಔಷದ ಮಾತ್ರೆ ಪಾಕವಿದು ಜನರು ಬಿಡದೇ
ಏಕಚಿತ್ತದಿ ಪಠಿಪುದೀ ಕೃತಿಯ ನಿತ್ಯ ದೈಹಿಕದ ಸುಖಕ್ಕೊಳಗಾಗದೇ ॥
ಕಂಡಲ್ಲಿ ಬೇಡಿ ಬಲು ಬೆಂಡಾದೆ ಗುರುವೆನಲು ಚಂಡಾಲನಿರೆ ಸಲಹುವಾ
ದಂಡ ಪ್ರಮಾಣದಿಂ ಕೊಂಡಾಡದವರ ಶಿರ ಚೆಂಡಾಗುವುದು ಯಮನಿಗೆ
ಕೊಂಡಾಡು ದುರಿತವನ ಕೆಂಡಾದ ಯತಿಯು ಇತ್ತಂಡವಾಗುವುದು ಸಂಪದಾ
ಕೊಂಡಾಡುವರ ಪೊರೆವ ಖಂಡಾದಿ ವಂದ್ಯ ಖಳ ಹಿಂಡಾರಿ ಪಾಂಡುವಿಠಲಾ ॥

॥ ಶ್ರೀ ಗುರುರಾಜೋ ವಿಜಯತೇ ॥

